ಶ್ರೀನಿಯಪ್ಪ (ರೇಷ್ಮೆ ರಾಜ್ಯ ಸಚಿವರು) (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ,

1991-92ರ ಆಯವ್ಯಯದಲ್ಲಿ ಕೃಷ್ಣರಾಜಪೇಟೆ ಕೋರ್ಟ್ ಕಟ್ಟಡಕ್ಕೆ ಹತ್ತುಲಕ್ಷ 10,00,000 ರೂಪಾಯಿಗಳನ್ನು ಒದಗಿಸಲಾಗಿದೆ. ಒಟ್ಟು ಅಂದಾಜು ವೆಚ್ಚ 35,70.000 ರೂಪಾಯಿಗಳು, ಆದ್ದರಿಂದ 2,00,000 ಹಣ ಮುಂದಿನ ಆಯವ್ಯಯದಲ್ಲಿ ಕಡಿಮೆ ಇರುವುದರಿಂದ ಲೋಕೋಪಯೋಗಿ ಇಲಾಖೆಯನ್ನು ಬೇರೆ ಕೋರ್ಟ್ ಕಟ್ಟಡಗಳಿಗೆ ಮೀಸಲಾತಿ ಇರುವ ಹಣವನ್ನು ಪರಿವರ್ತಿಸಿ ಆಡಳಿತಾತ್ಮಕ ಮುಂಜೂರಾತಿ ನೀಡಲು ಲೋಕೋಪಯೋಗಿ ಇಲಾಖೆಯನ್ನು ಕೇಳಲಾಗಿದೆ. ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯ ಸಹಮತಿ ಪಡೆದು ಮುಂದಿನ ವರ್ಷ 1991-92ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಪರಿಶೀಲಿಸಲಾಗುವುದು.

(20) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ವೈದ್ಯರುಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಪರಿಸಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡಗಳಿಗೆ ವಿಶೇಷ ನೇಮಕಾತಿ ಯೋಜನೆ ಅನ್ವಯ ಕರ್ನಾಟಕ ಲೋಕಸೇವಾ ಆಯೋಗ, ಭಾರತೀಯ ವೈದ್ಯ ಪದ್ಧತಿ ಹೋಮಿಯೋಪತಿ ಇಲಾಖೆಯಲ್ಲಿ ವೈದ್ಯರು ದರ್ಜೆ-2 (ಆಯುರ್ವೇದ) ಹುದ್ದೆಗಳಿಗೆ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 2 ಆರ್‌ಟಿಬಿ 89 ದಿನಾಂಕ 14ನೇ ಡಿಸೆಂಬರ್ 1989ರಂದು ಅರ್ಜಿ ಕರೆದು 14ನೇ ಮಾರ್ಚ್ 1990ರಲ್ಲಿ ಸಂದರ್ಶನ ನಡೆಸಿ ಒಟ್ಟು ಐದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಸರಿಯಷ್ಟೆ. ಆದರೆ ಆಯ್ಕೆ ಮಾಡಿ ಒಂದು ವರ್ಷವಾದರೂ ಅವರನ್ನು ಇನ್ನೂ ನೇಮಕಾತಿ ಮಾಡಿರುವುದಿಲ್ಲ. ಇದು ಯಾವ ಹಂತದಲ್ಲಿದೆ ಮತ್ತು ಎಷ್ಟು ದಿನದಲ್ಲಿ ನೇಮಕಾತಿ ಮಾಡುತ್ತೀರಿ ಎಂದು ಕೇಳಲು ಇಚ್ಚಿಪಡುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ ತಮ್ಮ ಅನುಮತಿ ಪಡೆದ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಚಿಸುತ್ತೇನೆ.

ಮೀಸಲಾತಿಯಿಂದ ಬಾಕಿ ಉಳಿದಿರುವ 18 ವೈದ್ಯಾಧಿಕಾರಿ, ದರ್ಜೆ - 3 (ಆಯುರ್ವೇದ) ಹುದ್ದೆಗಳನ್ನು ತುಂಬುವ ಸಲುವಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಿ ಕೊಡುವಂತೆ ದಿನಾಂಕ 26-10-1989ರಂದು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿತ್ತು. ಸದರಿ ಆಯೋಗವು ಈ ಕೆಳಕಂಡ 5 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆ ಆಯ್ಕೆ ಪಟ್ಟಿಯನ್ನು ದಿನಾಂಕ 31-3-1990ರಂದು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿತು.

1. ಶ್ರೀಮತಿ ಪುಷ್ಪ ಎ.ಎಸ್.
2. ಶ್ರೀಮತಿ ಆರ್. ಸರಸ್ವತಿ
3 ಶ್ರೀಮತಿ ಜಿ.ಎಸ್. ಶಕುಂತಲಾ
4. ಶ್ರೀ ತಾಂಡವ ಮೂರ್ತಿ
5. ಶ್ರೀ ಸತೀಶ ದುರ್ಗಾ ಭಟ್ಟಲ್

ಮೇಲಿನ ಅಭ್ಯರ್ಥಿಗಳಿಗೆ ನೇಮಕಾತಿ ನೀಡುವ ಮೊದಲು ವೈದ್ಯಕೀಯ ಪರೀಕ್ಷೆ, ಅವರುಗಳ ನಡತೆಯ ಬಗ್ಗೆ ಮತ್ತು ಅವರುಗಳ ಆಯ್ಕೆಯ ಸಮಯದಲ್ಲಿ ನೀಡಿರುವ ಪ್ರಮಾಣ ಪತ್ರಗಳು ಸರಿಯಾಗಿವೆಯೇ ಎಂಬುವುದರ ಬಗ್ಗೆ ಧೃಢೀಕರಿಸಿ ವರದಿಯನ್ನು ಕಳುಹಿಸಿ ಕೊಡುವಂತೆ ನಿರ್ದೇಶಕರು (ವೈ.ಶಿ.) ಬೆಂಗಳೂರು, ಆರಕ್ಷಕ ಮಹಾ ನಿರ್ದೇಶಕರು, ಬೆಂಗಳೂರು ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ದಿನಾಂಕ

15-5-90ರಂದು ಕೋರಲಾಗಿತ್ತು. ಈ ಪೈಕಿ ಅರಕ್ಷಕ ಮಹಾ ನಿರ್ದೇಶಕರಿಂದ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಮೇಲಿನ 5 ಅಭ್ಯರ್ಥಿಗಳ ಬಗ್ಗೆ ವರದಿಗಳು ಬಂದಿದೆ. ಆದರೆ, ವೈದ್ಯಕೀಯ ಪರೀಕ್ಷೆಯ ಬಗ್ಗೆ 3 ಅಭ್ಯರ್ಥಿಗಳ ಬಗ್ಗೆ ಮಾತ್ರ ವರದಿ ಬಂದಿದ್ದು ಇನ್ನುಳಿದ ಎರಡು ಅಭ್ಯರ್ಥಿಗಳು ಅಂದರೆ ಶ್ರೀಮತಿ ಆರ್. ಸರಸ್ವತಿ ಮತ್ತು ಶ್ರೀ ತಾಂಡವ ಮೂರ್ತಿ ಅವರುಗಳ ಬಗ್ಗೆ ವೈದ್ಯಕೀಯ ವರದಿ ಬರಬೇಕಾಗಿದ್ದು. ಇವರುಗಳ ಪೈಕಿ ದಿನಾಂಕ 24-3-91 ರಂದು ಶ್ರೀ ತಾಂಡವ ಮೂರ್ತಿ ಅವರ ಬಗ್ಗೆ ಮಾತ್ರ ವರದಿ ಬಂದಿದೆ. ಶ್ರೀಮತಿ ಸರಸ್ವತಿ ಅವರ ಬಗ್ಗೆ ಇನ್ನೂ ವರದಿ ಬಂದಿರುವುದಿಲ್ಲ.

ಶ್ರೀಮತಿ ಸರಸ್ವತಿ ಅವರು ಆಯ್ಕೆ ಪಟ್ಟಿಯಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಇರುವುದರಿಂದ ಅವರನ್ನು ಬಿಟ್ಟು ಬೇರೆಯವರಿಗೆ ನೇಮಕಾತಿ ನೀಡಲು ಬರುವುದಿಲ್ಲ. ಆದ ಕಾರಣ ಅವರ ಬಗ್ಗೆ ವೈದ್ಯಕೀಯ ವರದಿಯನ್ನು ಕೂಡಲೇ ಕಳುಹಿಸಿ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಅವರಿಂದ ವರದಿ ಬಂದ ಕೂಡಲೇ ಮೇಲಿನ ಅಭ್ಯರ್ಥಿಗಳಿಗೆ ನೇಮಕಾತಿಯನ್ನು ನೀಡಲಾಗುವುದು.

ರೈತರ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳ ಹೇಳಿಕೆ.

+ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೇ, ನಾನು, ಮೊನ್ನೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಪ್ರತ್ಯೇಕವಾದ ಹೇಳಿಕೆಯನ್ನು ಕೊಡುತ್ತೇನೆ ಎಂಬ ಮಾತನ್ನು ತಮ್ಮ ಮುಖಾಂತರ ಈಸದನಕ್ಕೆ ತಿಳಿಸಿದ್ದೆ. ಅದರ ಪ್ರಕಾರ ಈ ನನ್ನ ಹೇಳಿಕೆಯನ್ನು ಈ ಸದನದಲ್ಲಿ ಮತ್ತು ಇಲ್ಲಿ ಆದಮೇಲೆ ಆ ಸದನದಲ್ಲಿ ಕೂಡಾ ಹೋಗಿ ಕೊಡುತ್ತೇನೆ. ಇಲ್ಲಿ ನಾವು ತೆಗೆದು ಕೊಂಡಿರತಕ್ಕಂಥ ತೀರ್ಮಾನಗಳು ಸರಕಾರದಲ್ಲಿ ಇರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ನಾವು ಶಕ್ತಿ ಮೀರಿ ಇದರ ಬಗ್ಗೆ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವು ಕಾನೂನು ತೊಡಕುಗಳು ಮತ್ತೊಂದು ಇರುವುದರಿಂದ ಇನ್ನು ಕೆಲವು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಕೇಂದ್ರ ಸರಕಾರದ ವ್ಯಾಪ್ತಿಗೆ ಬರುವ ವಿಚಾರ ಆಗಿರುವುದರಿಂದ, ಇನ್ನು ಕೆಲವು ಸಂವಿಧಾನಕ್ಕೆ ತಿದ್ದುಪಡಿ ಮಾಡತಕ್ಕಂಥ ವಿಚಾರ ಇರುವುದರಿಂದ ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಪೂರ್ವಪೀಠಿಕೆಯಾಗಿ ಹೇಳಿ, ನಾವು ತೆಗೆದುಕೊಂಡಿರತಕ್ಕಂಥ ಕೆಲವು ತೀರ್ಮಾನವನ್ನು ತಮ್ಮ ಮುಖಾಂತರ ಇಡುತ್ತಿದ್ದೇನೆ. ಈ ಸಂದರ್ಭದಲ್ಲಿ ಇದರ ಬಗ್ಗೆ ಅನೇಕ ಜನ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿರುತ್ತಾರೆ. ವಿರೋಧಪಕ್ಷದ ನಾಯಕರು, ಬಿ.ಜೆ.ಪಿ. ಮಿತ್ರರು, ರೈತ ಸಂಘದ ಮಿತ್ರರು, ನಮ್ಮ ಪಕ್ಷದ ವತಿಯಿಂದ ಮತ್ತು ಸದನದಲ್ಲಿ ಕೂಡಾ ಎಲ್ಲಾ ಪಕ್ಷದ ವತಿಯಿಂದ ಎಲ್ಲರೂ ಸೇರಿ ಇದರ ಬಗ್ಗೆ ವ್ಯಾಖ್ಯಾನ ಮಾಡಿರುತ್ತಾರೆ. ನಮ್ಮೆಲ್ಲರ ಅಸಕ್ತ ಇರತಕ್ಕಂಥಾದ್ದು ರೈತರ ಸಮಸ್ಯಗಳ ಪರಿಹಾರದ ಬಗ್ಗೆ. ಅದಕ್ಕೋಸ್ಕರವಾಗಿ ಹೆಚ್ಚಿನ ರೂಪದಲ್ಲಿ ಪರಿಹಾರ ಕೊಡಬೇಕೆಂಬ ಸದಿಚ್ಛೆ ಸರಕಾರದ ಅಸೆ, ಆ ದಿಸೆಯಲ್ಲಿ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ಬಜೆಟ್ ಓದಿರತಕ್ಕಂಥವರಿಗೆ ಈಗಾಗಲೇ ಗೊತ್ತಾಗಿರಬೇಕು. ಈ ದಿಸೆಯಲ್ಲಿ ನಮ್ಮ ಚಿಂತನೆ ಆಯುವ್ಯಯ ಪತ್ರದ ಮುಖಾಂತರ ಸರಿದಿದೆ ಎನ್ನತಕ್ಕಂಥಾದ್ದು ನಾನೀಗ ಈ ಹೇಳಿಕೆಯನ್ನು ತಮ್ಮ ಮುಂದೆ ತಮ್ಮ ಅಪ್ಪಣೆ ಪಡೆದು ಇಡುತ್ತೇನೆ. ಕರ್ನಾಟಕ ರಾಜ್ಯದ ರೈತರ ಕಲ್ಯಾಣಕ್ಕಾಗಿ ಕೈಗೊಂಡ ನಮ್ಮ ಸರ್ಕಾರದ ನಿರ್ಧಾರಗಳು. ನಮ್ಮ ಕಾರ್ಯಕ್ರಮಗಳು ನಮ್ಮ ತೀರ್ಮಾನಗಳು ಈ ಕೆಳಕಂಡಂತೆ ಇವೆ. 1) ಕೃಷಿಗೆ ಸಂಬಂಧಿಸಿದಂತೆ ಬೆಲೆ ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ರೀತಿಗಳ ಒಂದು ಸ್ಥಾಯಿ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿಯಲ್ಲಿ ರೈತ ಪ್ರತಿನಿಧಿಗಳು